**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017** **ಫ್ರಾ.ಸಾ.37**

**ಚಾ.ಸಾ.41**

| | | |
|---|---|---|
| ಸಾಕ್ಷಿದಾರರ ಹೆಸರು | - | ಸುರೇಶ ಶೆಟ್ಟಿ |
| ತಂದೆಯ ಹೆಸರು | - | ಸದಾನಂದ ಶೆಟ್ಟಿ |
| ವಯಸ್ಸು | - | 49 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಬೈಲೂರು, ಹಿರಿಯಡ್ಕ. |

ದಿನಾಂಕಃ 07-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಹಿರಿಯಡ್ಕದಲ್ಲಿರುವ ದಿಯಾ ಬಾರ್ ಅಂಡ್ ರೆಸ್ಟೋರೆಂಟ್ ಗೊತ್ತು. ಈ ಪ್ರಕರಣದ ಒಂದನೇ ಆರೋಪಿ ಪ್ರವೀಣ್ ಕುಲಾಲ್ ಈತನ ಪರಿಚಯ ಇರುವುದಿಲ್ಲ. ಸುಮಾರು 9 ವರ್ಷದ ಹಿಂದೆ ದಿಯಾ ಬಾರ್ ನಲ್ಲಿ ಕೊಲೆಯಾಗಿದ್ದು ಅದು ಯಾರ ಕೊಲೆ ಮತ್ತು ಹೇಗೆ ಆಯಿತು ಗೊತ್ತಿಲ್ಲ. ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿದ್ದು ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ87 ಎಂದು ಗುರುತಿಸಲಾಗಿದೆ. ಸದ್ರಿ ದಾಖಲೆ ನಿಜ ಪ್ರತಿ ಇರುವ ಕಾರಣ ಸಾಕ್ಷಿಯ ಸಹಿಯನ್ನು ಗುರುತಿಸಿಲ್ಲ. ನನ್ನ ಸಮಕ್ಷಮದಲ್ಲಿ ಪೋಲಿಸರು ಕಾರು ನಂ.ಕೆಎ-19-ಎಂಬಿ-1616 ಹಾಗೂ ಒಂದು ಡಮ್ಮಿ ಪಿಸ್ತೂಲು ಹಾಗೂ ಇನ್ನಿತರ ಸೊತ್ತುಗಳನ್ನು ಅಮಾನತ್ತು ಪಡಿಸಿ ಕೊಂಡಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

ದಿನಾಂಕ 19-12-2016 ರಂದು ಪೋಲಿಸರು ಒಂದನೇ ಆರೋಪಿ ಮೃತ ಪ್ರವೀಣ್ ಕೊಲೆಯಾಗಿರುವಂತಹಾ ಸ್ಥಳ ಬೊಮ್ಮರಬೆಟ್ಟು ಗ್ರಾಮದ ಕೋಟ್ನಕಟ್ಟೆ ಎಂಬಲ್ಲಿರುವ ದಿಯಾ ಗಾರ್ಡನ್ ಅಂಡ್ ರೆಸ್ಟೋರೆಂಟ್ ನಲ್ಲಿಯ ಒಂದನೇ ಆರೋಪಿ ಕೊಲೆಯಾದ ಸ್ಥಳಕ್ಕೆ ಬಂದಿದ್ದು ಆ ಸಂದರ್ಬದಲ್ಲಿ ಪೋಲಿಸರು ಒಂದನೇ ಆರೋಪಿಗೆ ಸೇರಿದ ಕೆಎ-19-ಎಂಬಿ-1616 ಕಾರು ಹಾಗೂ ಒಂದು ಡಮ್ಮಿ ಪಿಸ್ತೂಲು ಹಾಗೂ ಇನ್ನಿತರ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ-87 ರಂತೆ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಕಾರು ಮತ್ತು ಡಮ್ಮಿ ಪಿಸ್ತೂಲನ್ನು ಒಂದನೇ ಆರೋಪಿ ಈ ಪ್ರಕರಣದಲ್ಲಿ ಉಪಯೋಗಿಸಿದ್ದಾನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.